ಮತ್ತು ಇದರೊಂದಿಗೇ ಬದುಕುತ್ತಿರುತ್ತೇವೆ. ಹಾಗಾಗಿ ನಾವು ಯೋಚಿಸುವ ಪ್ರತಿಯೊಂದು ಕ್ರಮದಲ್ಲಿಯೂ ದಿನನಿತ್ಯದ ಆಗುಹೋಗುಗಳು ಬೆರೆತುಹೋಗಿರುತ್ತವೆ. 'ದೇವರು' ಎನ್ನುವ ಪದ ಮತ್ತು ಅದರ ಅಸ್ತಿತ್ವವು ಮಾನವೀಯತೆಯ ಕಾಲ್ಪನಿಕ ಸೃಷ್ಟಿ. ನನ್ನ ಕಲ್ಪನೆಯಲ್ಲಿ ನಾನು ಸತ್ಯಕ್ಕೆ ದೇವರ ಸ್ಥಾನ ನೀಡಿದ್ದೇನೆ.

ನಾನು ರಚಿಸಿದ ಕಾವ್ಯಗಳು, ಕಥೆಗಳು ಹಾಗೂ ಕಾದಂಬರಿಗಳೆಲ್ಲವೂ ನನ್ನ ಬದುಕಿನ ಅನುಭವದೊಂದಿಗೆ ಬೆರೆತುಹೋಗಿವೆ; ಏಕೆಂದರೆ ಇವು ನನ್ನ ಸೃಷ್ಟಿ. ನಾನು ಅನುಭವಿಸಿದ ಕ್ಷಣಗಳನ್ನು ಇತರರು ಅವರದ್ದೇ ರೀತಿಯಲ್ಲಿ ಅನುಭವಿಸುತ್ತಾರೆ. ಹಾಗಾಗಿ ನನ್ನ ಅನುಭವಕ್ಕೂ ಇತರರ ಅನುಭವಕ್ಕೂ ವ್ಯತ್ಯಾಸ ಸಹಜ. ಎಲ್ಲರ ಅನುಭವಗಳೂ ಅವರವರ 'ಸೃಷ್ಟಿ'ಯಲ್ಲಿ ದಾಖಲಾಗುತ್ತಲೇ ಇರುತ್ತವೆ; ಅವು ವಿಭಿನ್ನವೂ ಆಗಿರುತ್ತವೆ. ನನ್ನ ಸಾಹಿತ್ಯ ಕೃಷಿಗೆ ನಾನು ಅನುಭವಿಸಿದ, ಆಸ್ವಾದಿಸಿದ, ಕೇಳಿದ, ನೋಡಿದ ಘಟನೆಗಳೇ ಸ್ಫೂರ್ತಿ ಮತ್ತು ಶಕ್ತಿ.

◆ **ನಿಮ್ಮ 'ಪಾಂಚ್ ಸಾಲ್ ಕಿ ಲಡಕಿ' (ಐದು ವರ್ಷದ ಹುಡುಗಿ) ಕವನದಲ್ಲಿ ನೀವು 'ನಾನು ಮನೆಯಲ್ಲಿಯೇ ಇದ್ದರೂ ಮನೆಯಿಂದ ವಂಚಿತನಾಗಿದ್ದೇನೆ' ಎಂದು ಬರೆದಿದ್ದೀರಿ. 'ಕವಿತಾ ಲಿಖನಾ' (ಕವನ ಬರೆಯುವುದು) ಕವಿತೆಯಲ್ಲಿಯೂ ಇಂತಹುದೇ ಅರ್ಥವನ್ನು 'ಮನೆ'ಗೆ ನೀಡಿದ್ದೀರಿ. 'ಸಾಹಿತ್ಯ ರಚಿಸುವುದಕ್ಕೆ ಬೇರೆ ಯಾವುದೋ ಸ್ಥಳವನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಮನೆಯೇ ನನಗೆ ಸೂಕ್ತವಾದ ಸ್ಥಳ' ಎಂದು ಹೇಳುತ್ತೀರಿ. 'ಮನೆಯೆನ್ನುವುದು ಎಲ್ಲಿಯೋ ಇಲ್ಲ; ನೀವು ಇರುವ ಸ್ಥಳದಲ್ಲಿಯೇ ಮನೆ ಇರುತ್ತದೆ' ಎಂದು ನಿಮ್ಮ ಕಾದಂಬರಿಯಲ್ಲಿ ಬರೆದಿದ್ದೀರಿ. ಹಾಗಿದ್ದರೆ ನಿಮ್ಮ ಪ್ರಕಾರ 'ಮನೆ' ಎಂದರೆ ಏನು?**

'ಮನೆ' ಕುರಿತಾದ ನನ್ನ ವ್ಯಾಖ್ಯಾನ ಸರಳ. 'ನಾನು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಇರುವ ಸ್ಥಳವೇ ಮನೆ. ಮನಸ್ಸು ಆ ಸ್ಥಳವನ್ನು ಬಿಟ್ಟು ಹೊರಕ್ಕೆ ಹೋದರೆ ನಾವು 'ಮನೆ'ಯಿಂದ ಹೊರಗೆ ಬಂದಂತೆ! ಮತ್ತೆ ಅದೇ ಸ್ಥಳಕ್ಕೆ ಮನಸ್ಸು ಬಂದರೆ, ನಾವು 'ಮನೆ'ಗೆ ಹಿಂದಿರುಗಿದಂತೆ. ನನ್ನ ಬದುಕನ್ನು ಸಾಗಿಸುವುದಕ್ಕೆ, ಬದುಕಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಪೂರೈಸುವುದಕ್ಕೆ ಸೂಕ್ತವಾದ ಸ್ಥಳವೇ 'ನನ್ನ ಮನೆ.'

ಸಾಮಾನ್ಯವಾಗಿ ನಾವು 'ಒಂದು ಕುಟುಂಬ ವಾಸಿಸುವ ಸ್ಥಳವೇ ಮನೆ; ಇಂತಹ ಹಲವಾರು ಮನೆಗಳು ಒಂದೇ ಸ್ಥಳದಲ್ಲಿದ್ದರೆ ಪಟ್ಟಣ, ಹಳ್ಳಿ ಅಥವಾ ನಗರ. ಇಂತಹ ಹಲವಾರು ಹಳ್ಳಿಗಳು ಸೇರಿದರೆ ತಾಲ್ಲೂಕು, ರಾಜ್ಯ, ದೇಶ ಇತ್ಯಾದಿ' ಎಂದು ಭಾವಿಸುತ್ತೇವೆ. ಆದರೆ ವಾಸ್ತವದಲ್ಲಿ ನಮ್ಮ ಮನಸ್ಸು ನೆಲೆನಿಲ್ಲುವ ತಾಣವೇ ನಿಜವಾದ ಮನೆ. ಹಾಗಾಗಿಯೇ ಕೆಲವೊಮ್ಮೆ ನಾವು



ನಮ್ಮ ಮನೆಯಲ್ಲಿಯೇ ಇದ್ದರೂ ಬೇರೆಲ್ಲಿಯೋ ಇದ್ದಂತೆ ಭಾಸವಾಗುತ್ತದೆ. ಮನೆಯೊಳಗಿದ್ದೂ ನಾವು ಮನೆಯನ್ನು ಕಳೆದುಕೊಂಡಿರುತ್ತೇವೆ; ಒಂಟಿತನವನ್ನು ಅನುಭವಿಸುತ್ತೇವೆ. ಇದನ್ನೇ ನಾನು ನನ್ನ ಬರವಣಿಗೆಯಲ್ಲಿಯೂ ದಾಖಲಿಸಿದ್ದೇನೆ. ನಾವು ಇರುವ ಮನೆಯಲ್ಲಿಯೇ ಪ್ರತಿ ಕ್ಷಣವೂ ಹೊಸದನ್ನು ಕಾಣುವ ಮನಸ್ಥಿತಿ ನಮ್ಮದಾಗಿದ್ದರೆ, ಸದಾ ನಾವು 'ಮನೆ'ಯ ಒಳಗೇ ಇರುತ್ತೇವೆ.

◆ **ನಿಮ್ಮ ಬಹುತೇಕ ಕೃತಿಗಳ ಶೀರ್ಷಿಕೆಗಳು ವಿಭಿನ್ನವಾಗಿವೆ. ಉದಾ: 'ದೀವಾರ್ ಮೆ ಏಕ್**